# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಚಲಿಸಬಲ್ಲ ಪರಿಸರ ಸ್ನೇಹಿ ಕಿಯೋಸ್ಕ್ 'ಮತ್ಸ್ಯವಾಹಿನಿ' ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

ಓದಲಾಗಿದೆ:- (1) ಕೇಂದ್ರ ಸರ್ಕಾರದ ಪತ್ರ ಸಂ: J-01012/65/2022-Fy ದಿನಾಂಕ: 06-01-2023
(2) ಸರ್ಕಾರದ ಆದೇಶ ಸಂ: ಪಸಂಮೀ ಇ-58 ಮೀಇಯೋ 2023 ದಿ: 23-03-2023
(3) ಮೀನುಗಾರಿಕೆ ನಿರ್ದೇಶನಾಲಯದ ಪತ್ರ ಸಂಖ್ಯೆ: DOF-TECHOBRS/05/2023 (ಭಾಗ), ದಿನಾಂಕ: 30-06-2023.

15 JUL 2023

*****

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ "ಮತ್ಸ್ಯವಾಹಿನಿ" ಯೋಜನೆಯ ಅನುಷ್ಠಾನ ಮಾಡಲು ಘಟಕ ವೆಚ್ಚ ರೂ.8.50 ಲಕ್ಷದಂತೆ ಒಟ್ಟು 300 ಗುರಿಗಳನ್ನು ಯೋಜನಾ ವೆಚ್ಚ ರೂ.2550.00 ಲಕ್ಷಗಳಲ್ಲಿ ಕೇಂದ್ರದ ಪಾಲು ರೂ.1530.00 ಲಕ್ಷಗಳು ರಾಜ್ಯದ ಪಾಲು ರೂ. 1020.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ರಾಜ್ಯದಲ್ಲಿ ಮತ್ಸ್ಯವಾಹಿನಿ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಮಂಗಳೂರು ಇವರನ್ನು ನೇಮಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಸದರಿ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಅನುಷ್ಠಾನ ಮಾಡಲು ಏಜೆನ್ಸಿಯ ಆಯ್ಕೆ ಕುರಿತು RFP ಯನ್ನು ಕರೆಯಲಾಗಿರುತ್ತದೆ. ಸದರಿ ಪ್ರಕ್ರಿಯೆಯಲ್ಲಿ M/s Motherhood Foods, Bengaluru ಮತ್ತು M/s Sonic Momentum Technologies, Bengaluru ರವರು ಭಾಗವಹಿಸಿದ್ದು, ದಿನಾಂಕ: 16-02-2023 ರಂದು ಈ ಎರಡು ಸಂಸ್ಥೆಗಳು ಸಲ್ಲಿಸಿದ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಮೌಲ್ಯಮಾಪನ ಮಾಡಿ ತಾಂತ್ರಿಕ ಬಿಡ್ ಅಂತಿಮಗೊಳಿಸಿದ್ದು, ಆರ್ಥಿಕ ಬಿಡ್ ತೆರೆಯಲಾಗಿದೆ ಎಂದು ತಿಳಿಸಿರುತ್ತಾರೆ. ಇದರಲ್ಲಿ M/S Motherhood foods, Bengaluru ಇವರು ಅಂತಿಮವಾಗಿ 97.40 ಅಂಕಗಳನ್ನು ಪಡೆದು ಯಶಸ್ವಿ ಬಿಡ್‌ದಾರರಾಗಿರುತ್ತಾರೆ. ಇವರೊಂದಿಗೆ ನಡೆದ ಸಮಾಲೋಚನೆ ಸಭೆಯು ನಿರ್ಣಯಿಸಿದಂತೆ ಮೀನುಗಾರಿಕೆ ನಿರ್ದೇಶನಾಲಯದ ಪತ್ರ ಸಂ: ಕೆಎಫ್‌ಡಿಸಿ/2022-23/IND179 ದಿನಾಂಕ: 27-02-2023 ರಲ್ಲಿ M/S Motherhood foods, Bengaluru ರವರು 300 ಮತ್ಸ್ಯವಾಹಿನಿ ವಾಹನಗಳನ್ನು ಸರಬರಾಜು ಮಾಡಲು ಒಟ್ಟು ರೂ 25,45,00,000/- (Inclusive of GST & Delivery charges) ಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

ಅದರಂತೆ M/S Motherhood foods, Bengaluru ರವರಿಗೆ ಅನುಮೋದಿತ RFP ಷರತ್ತು ನಿಬಂಧನೆಗಳನ್ವಯ Letter of Indent ಜಾರಿ ಮಾಡಲಾಗಿರುತ್ತದೆ. M/S Motherhood foods, Bengaluru ರವರು ಅನುಮೋದಿತ RFP ಷರತ್ತು ನಿಬಂಧನೆಗಳನ್ವಯ ಕರಾರು ಪತ್ರ ಸಲ್ಲಿಸಿದ ನಂತರ ಡಿ.ಪಿ.ಆರ್. ಅನ್ವಯ ಯೋಜನೆಯನ್ನು ಅನುಷ್ಠಾನ ಮಾಡುವ ಜವಾಬ್ದಾರಿಯನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರಿಗೆ ವಹಿಸಲಾಗಿರುತ್ತದೆಂದು ತಿಳಿಸಿ, ಈ ಸಂಬಂಧ ಕೇಂದ್ರ ಪುರಸ್ಕೃತ "ಮತ್ಸ್ಯವಾಹಿನಿ" ಯೋಜನೆಯನ್ನು ಅನುಮೋದಿತ ಟೆಂಡರ್ RFP ಯನ್ವಯ ಹಾಗೂ ಅನುಬಂಧದಲ್ಲಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನ ಮಾಡಲು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-58/ಮೀಇಯೋ/2023, ಬೆಂಗಳೂರು**
**ದಿನಾಂಕ: 13-07-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಚಲಿಸಬಲ್ಲ ಪರಿಸರ ಸ್ನೇಹಿ ಕಿಯೋಸ್ಕ "ಮತ್ಸ್ಯವಾಹಿನಿ" ಯೋಜನೆಯನ್ನು ಅನುಮೋದಿತ ಟೆಂಡರ್ RFP ಯನ್ವಯ ಹಾಗೂ ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧ**ದಲ್ಲಿನ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

K.S. Chinnabai 13/7/2023
(ಚಿನ್ನಾಬಾಯಿ ಕೆ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

13/07/2023

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ ಎಸ್ ಎ)(ಇ&ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಹೊಯಿಗೆ ಬಜಾರ್, ಬೆಂಗಳೂರು.
5) ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗ _ ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಸಂಬಂಧಪಟ್ಟವರಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
11) ಕಂಟ್ರೋಲ್ ರೂಂ-ಕಂ-24*7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ.
12) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು/ ಸಮನ್ವಯ –ಕಂಪೆಂಡಿಯಂ.

**ಪ್ರತಿಯನ್ನು**

1) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.